## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ (ಆ) ಶಾಖೆ: ಕೇಂದ್ರ ಕಛೇರಿ: 2ನೇ ಮಹಡಿ, ಕೆ.ಹೆಚ್.ರಸ್ತೆ
ಶಾಂತಿನಗರ: ಬೆಂಗಳೂರು 560027

ಇ-ಮೇಲ್ : ctmo@mybmtc.com Ph No: 080-22537559

ಸಂಖ್ಯೆ/ಬೆಂ.ಮ.ಸಾ.ಸಂಸ್ಥೆ/ಕೇಕ/ಸಂಚಾರ/ಆ/178/ 150 /2024-25 ದಿನಾಂಕ: 23.04.2024

### ಕಛೇರಿ ಆದೇಶ

ವಿಷಯ: ಲೋಕಸಭಾ ಚುನಾವಣೆ ಪ್ರಯುಕ್ತ ದಿನಾಂಕ: **25.04.2024, 26.04.2024** ಹಾಗೂ **27.04.2024** ರಂದು ಕರಾರಸಾ ನಿಗಮದ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ಸಂಸ್ಥೆಯ ಸಾರಿಗೆಗಳ ಕಾರ್ಯಾಚರಣೆ ಬಗ್ಗೆ.

ಉಲ್ಲೇಖ: ಸಂ/ಕರಾಸಾ/ಕೇಕ/ಸಂ/ಕಾ-4/ಹೆ.ಕಾ/ 358 /24-25 ದಿನಾಂಕ: 22.04.2024.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದಲ್ಲಿ ದಿನಾಂಕ: 26.04.2024 ಹಾಗೂ 07.05.2024 ರಂದು ಎರಡು ಸುತ್ತಿನಲ್ಲಿ ಲೋಕಸಭಾ ಚುನಾವಣೆ ಮತದಾನ ನಡೆಯಲಿದ್ದು, ಮೊದಲ ಸುತ್ತಿನ ಮತದಾನಕ್ಕಾಗಿ ಬೆಂಗಳೂರಿನಿಂದ ಹೊರ ಊರುಗಳಿಗೆ ಹೋಗುವ ಪ್ರಯಾಣಿಕರ ಸಂಖ್ಯೆ ಅಧಿಕವಾಗಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ದಿನಾಂಕ: **25.04.2024, 26.04.2024** ಹಾಗೂ **27.04.2024** ರಂದು ಕರಾರಸಾ ನಿಗಮದ ಕಾರ್ಯಾಚರಣೆಯ ವ್ಯಾಪ್ತಿಯ ಸ್ಥಳಗಳಿಗೆ ಬೆಂ.ಮ.ಸಾ.ಸಂಸ್ಥೆಯಿಂದ ಕೆಳಕಂಡಂತೆ ಹೆಚ್ಚುವರಿ ಬಸ್ಸುಗಳನ್ನು ಆಚರಣೆಗೊಳಿಸುವುದು.

| ಸಾರಿಗೆ ಕಾರ್ಯಾಚರಣೆ ಸ್ಥಳ | ವಲಯ | ಬಸ್ಸುಗಳ ಸಂಖ್ಯೆ, ದಿನಾಂಕ ಮತ್ತು ಸಮಯ | | |
|---|---|---|---|---|
| | | 25.04.2024 (18:00-23:00) | 26.04.2024 (06:00-15:00) | 27.04.2024 (08:00-13:00) |
| ಮಧುಗಿರಿ | ಪೂರ್ವ | 10 | 20 | |
| ಚಿಕ್ಕಮಗಳೂರು | | 20 | 10 | |
| ಪಾವಗಡ | | 30 | 20 | |
| ಒಟ್ಟು | | **60** | **50** | |
| ಮೈಸೂರು | ಪಶ್ಚಿಮ | 50 | 50 | 40 |
| ಮಂಡ್ಯ | | 15 | 20 | |
| ಮಳವಳ್ಳಿ (ಮೈಸೂರು ರಸ್ತೆ) | | 5 | 10 | |
| ಕೊಳ್ಳೇಗಾಲ (ಮೈಸೂರು ರಸ್ತೆ) | | 10 | 10 | |
| ಟಿ.ನರಸೀಪುರ | | 20 | 10 | |
| ಒಟ್ಟು | | **100** | **100** | **40** |
| ತುರುವೇಕೆರೆ | ಉತ್ತರ | 20 | 20 | |
| ಹಾಸನ | | 25 | 25 | |
| ಚಿಕ್ಕಬಳ್ಳಾಪುರ | | 20 | 20 | |
| ಅರಕಲಗೂಡು/ಹೊಳೆನರಸೀಪುರ | | 20 | 15 | |
| ಒಟ್ಟು | | **85** | **80** | |
| ಚಿತ್ರದುರ್ಗ | ದಕ್ಷಿಣ | 30 | 20 | |
| ಹೊಸದುರ್ಗ | | 30 | 20 | |
| ಚಳ್ಳಕೆರೆ | | 20 | 10 | |
| ಕೊಳ್ಳೇಗಾಲ (ಕನಕಪುರ ರಸ್ತೆ) | | 10 | 10 | |
| ಮಳವಳ್ಳಿ (ಕನಕಪುರ ರಸ್ತೆ) | | 10 | 10 | |
| ಟಿ.ನರಸೀಪುರ | | | 10 | |
| ಒಟ್ಟು | | **100** | **80** | |

Scanned by CamScanner

| ಸಾರಿಗೆ ಕಾರ್ಯಾಚರಣೆ ಸ್ಥಳ | ವಲಯ | ಬಸ್ಸುಗಳ ಸಂಖ್ಯೆ, ದಿನಾಂಕ ಮತ್ತು ಸಮಯ | | |
|---|---|---|---|---|
| | | 25.04.2024 (18:00–23:00) | 26.04.2024 (06:00–15:00) | 27.04.2024 (08:00–13:00) |
| ಕೋಲಾರ | ಈಶಾನ್ಯ | 30 | 20 | |
| ಮಾಲೂರು | | 10 | 10 | |
| ಮುಳಬಾಗಿಲು | | 10 | 10 | |
| ಶಿಡ್ಲಘಟ್ಟ | | 15 | 10 | |
| ಗೌರಿಬಿದನೂರು | | 20 | 10 | |
| ಬಾಗೇಪಲ್ಲಿ | | 15 | 10 | |
| ಒಟ್ಟು | | 100 | 70 | |
| ತುಮಕೂರು | ವಾಯುವ್ಯ | 50 | 30 | |
| ಕಡೂರು/ಅರಸೀಕೆರೆ | | 20 | 20 | |
| ಶಿವಮೊಗ್ಗ | | 20 | 0 | |
| ಶಿರಾ/ಹಿರಿಯೂರು | | 20 | 20 | |
| ದಾವಣಗೆರೆ | | 20 | 15 | |
| ಒಟ್ಟು | | 130 | 85 | |
| | ಒಟ್ಟಾರೆ | 575 | 465 | 40 |

- ವಿಭಾಗೀಯ ಸಂಚಾರ ಅಧಿಕಾರಿ, ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿ, ಕೇಂದ್ರೀಯ ವಲಯರವರು, ಕರಾರಸಾ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಪೇಗೌಡ ಬಸ್ ನಿಲ್ದಾಣರವರ ಸಮನ್ವಯದೊಂದಿಗೆ ಪ್ರಯಾಣಿಕರ ದಟ್ಟಣೆ/ಬೇಡಿಕೆಯಿರುವ ಸ್ಥಳಗಳಿಗೆ ಹೆಚ್ಚುವರಿ ಬಸ್ಸುಗಳನ್ನು ಕಾರ್ಯಾಚರಣೆಗೊಳಿಸಲು ಕ್ರಮ ವಹಿಸುವುದು.
- ಪಶ್ಚಿಮ ವಲಯದಿಂದ ಮೈಸೂರು ವಲಯಕ್ಕೆ ಪ್ರಯಾಣಿಕರ ದಟ್ಟಣೆಗನುಗುಣವಾಗಿ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಬಸ್ಸುಗಳನ್ನು ಆಚರಣೆಗೊಳಿಸುವುದು ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿ, ಪಶ್ಚಿಮ ವಲಯರವರು ವಿಭಾಗೀಯ ನಿಯಂತ್ರಣಾಧಿಕಾರಿ, ಬೆಂಗಳೂರು ಕೇಂದ್ರೀಯ ವಿಭಾಗ, ಕರಾರಸಾ ನಿಗಮರವರ ಸಹಯೋಗದೊಂದಿಗೆ ಸದರಿ ಬಸ್ಸುಗಳ ಕಾರ್ಯಾಚರಣೆ ಉಸ್ತುವಾರಿ ನೋಡಿಕೊಳ್ಳುವುದು.
- ಹೆಚ್ಚುವರಿ ಬಸ್ಸುಗಳನ್ನು ಆಚರಣೆ ಸಂಬಂಧವಾಗಿ ವಿಭಾಗೀಯ ಸಂಚಾರ ಅಧಿಕಾರಿಗಳು ಪೂರ್ವ, ಉತ್ತರ ಹಾಗೂ ಕೇಂದ್ರೀಯ ವಲಯರವರು ಕೆಂಪೇಗೌಡ ಬಸ್ ನಿಲ್ದಾಣ, ಈಶಾನ್ಯ ವಲಯರವರು ಟಿನ್ ಫ್ಯಾಕ್ಟರಿ ಜಂಕ್ಷನ್, ಪಶ್ಚಿಮ ವಲಯರವರು ಮೈಸೂರು ರಸ್ತೆ ಬಸ್ ನಿಲ್ದಾಣ, ವಾಯುವ್ಯ ವಲಯರವರು ಜಾಲಹಳ್ಳಿ ಕ್ರಾಸ್ ಜಂಕ್ಷನ್ ಹಾಗೂ ದಕ್ಷಿಣ ವಲಯರವರು ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿ ಮೇಲೆ ತಿಳಿಸಿರುವ ದಿನಾಂಕ/ಸಮಯದಲ್ಲಿ ಖುದ್ದು ಹಾಜರಿದ್ದು, ಸೂಕ್ತ ಮೇಲ್ವಿಚಾರಣೆ ಮಾಡಿಸುವುದು.
- ಘಟಕಗಳಿಂದ ಹೆಚ್ಚುವರಿಯಾಗಿ ಕಾರ್ಯಾಚರಣೆಗೊಳಿಸುವ ಬಸ್ಸುಗಳಲ್ಲಿ ಇಟಿಎಂ ಮೂಲಕ ಟಿಕೇಟ್ ವಿತರಣೆಗೆ ಅನುವಾಗುವಂತೆ ಮಾರ್ಗ/ಅನುಸೂಚಿಗಳನ್ನು Create ಮಾಡಲಾಗಿದ್ದು, ಘಟಕಗಳಿಂದ ಬಸ್ಸುಗಳನ್ನು ನಿರ್ಗಮನಗೊಳಿಸುವ ಮೊದಲು, ಇಟಿಎಂನಲ್ಲಿ **Fare Matrix update** ಆಗಿರುವ ಬಗ್ಗೆ ಪರಿಶೀಲಿಸಿಕೊಂಡು ಆಚರಣೆಗೊಳಿಸುವುದು ಹಾಗೂ ಇಟಿಎಂ ಮೂಲಕ ಪ್ರಯಾಣಿಕರ ಟಿಕೇಟ್ ವಿತರಣೆಗೆ ಕ್ರಮ ವಹಿಸುವುದು.
- **FASTag** ಇರುವ ಬಸ್ಸುಗಳನ್ನು ಆಚರಣೆಗೊಳಿಸಲು ಆದ್ಯತೆ ನೀಡುವುದು.
- ಪ್ರಯಾಣಿಕರ ದಟ್ಟಣೆ ಇರುವ ಮಾರ್ಗಗಳಲ್ಲಿ ಮಾತ್ರ ಬಸ್ಸುಗಳನ್ನು ಕಾರ್ಯಾಚರಣೆಗೊಳಿಸುವುದು ಹಾಗೂ ಘಟಕವಾರು ಆಚರಣೆಗೊಳಿಸಿದ ಬಸ್ಸುಗಳ ವಿವರವನ್ನು ದಿನಾಂಕ: **29.04.2024** ರೊಳಗೆ ಈ ಕಛೇರಿಗೆ ಸಲ್ಲಿಸುವುದು.

ಮುಖ್ಯ ಸಂಚಾರ ವ್ಯವಸ್ಥಾಪಕರು (ಆ)
ಬೆಂ.ಮ.ಸಾ.ಸಂಸ್ಥೆ.

ಗೆ,

ಎಲ್ಲಾ ವಲಯಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳು/
ವಿಭಾಗೀಯ ಸಂಚಾರ ಅಧಿಕಾರಿಗಳು ಹಾಗೂ
ವಿಭಾಗೀಯ ಸಂಚಾರ ಅಧಿಕಾರಿ, ಕೆಬಿಎಸ್, ಬೆಂ.ಮ.ಸಾ.ಸಂಸ್ಥೆ.

Scanned by CamScanner

**ಪ್ರತಿಯನ್ನು**

1) ಆಪ್ತ ಕಾರ್ಯದರ್ಶಿ/ಸಹಾಯಕರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿರ್ದೇಶಕರು (ಮಾ.ತಂ.) ಬೆಂ.ಮ.ಸಾ.ಸಂಸ್ಥೆ ರವರಿಗೆ ಮಾಹಿತಿಗಾಗಿ ಕಳುಹಿಸಿದ್ದು, ಮಾನ್ಯರ ಗಮನಕ್ಕೆ ತರಲು ಕೋರಲಾಗಿದೆ.
2) ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಕರಾರಸಾ ನಿಗಮ, ಕೇಂದ್ರ ಕಛೇರಿ ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ), ಮುಖ್ಯ ತಾಂತ್ರಿಕ ಅಭಿಯಂತರರು ಹಾಗೂ ಮುಖ್ಯ ಗಣಕ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4) **ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿಗಳು, ಬೆಂ.ಮ.ಸಾ.ಸಂಸ್ಥೆ ರವರಿಗೆ ಮಾಹಿತಿಗಾಗಿ ಹಾಗೂ ಮೇಲ್ಕಂಡ ದಿನಾಂಕಗಳಂದು ಸಂಜೆ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಒಂದು ಸಾರಥಿ ಗಸ್ತು ಪಡೆಯನ್ನು ನಿಯೋಜಿಸಿ, ಮೇಲ್ವಿಚಾರಣೆ ಮಾಡಿಸಲು ಕೋರಲಾಗಿದೆ.**
5) ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಕೇಂದ್ರೀಯ ವಿಭಾಗ, ಕರಾರಸಾ ನಿಗಮ ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6) ಹಿರಿಯ/ಘಟಕ ವ್ಯವಸ್ಥಾಪಕರು, ಘಟಕ-2 ರಿಂದ 51 ಬೆಂಮಸಾಸಂಸ್ಥೆ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

Scanned by CamScanner